ಪಾಸ್ತಿ ಇರುವಾಗ ರೂಪ ಯಾರಿಗೆ ಬೇಕು? ಇಷ್ಟೆಲ್ಲಾ ಇದ್ದರೆ ರಾಣಿಯಂತೆ ಇರಬಹುದು' ಎಂದುಕೊಂಡಿದ್ದಳು.

ಒಂದು ತಿಂಗಳಲ್ಲಿ ಮದುವೆ ನಡೆದಿತ್ತು. ಆ ವರ್ಷದೊಳಗೆ ಸುಬ್ಬರಾಯರು ತಮ್ಮ ಕುಟುಂಬವನ್ನು ಬೆಂಗಳೂರಿಗೆ ಶಿಫ್ಟ್ ಮಾಡಿದ್ದರು. ಗಿರಿನಗರದಲ್ಲಿ ಭವ್ಯ ಬಂಗಲೆ ಕಟ್ಟಿಸಿ, ಸಾವಿರಾರು ಜನರನ್ನು ಕರೆದು ಗೃಹಪ್ರವೇಶ ಮಾಡಿದ್ದರು. ಭುವನಾಳ ತಾಯಿ ತಂದೆ ಮಗಳ ಅದೃಷ್ಟನೋಡಿ ಹಿರಿಹಿರಿ ಹಿಗ್ಗಿದ್ದರು. ರತ್ನಮ್ಮ ತಿಂಗಳಾಗುತ್ತಿದ್ದಂತೆ 25,000 ಸೊಸೆಯ ಕೈಗೆ ಕೊಟ್ಟು, "ಮನೆಗೆ ಬೇಕಾದ ಸಾಮಾನು ಸರಂಜಾಮು ನೀನೇ ತರಿಸು. ಎಲ್ಲರ ಬೇಕು ಬೇಡ ನೀನೇ ನೋಡಿಕೊಳ್ಳಬೇಕು. ಹಬ್ಬ ಹುಣ್ಣಿಮೆಗಳಲ್ಲಿ ನಿನ್ನದೇ ಉಸ್ತುವಾರಿಯಲ್ಲಿ ಎಲ್ಲಾ ನಡೆಯಬೇಕು" ಎನ್ನುತ್ತಿದ್ದರು. ಭುವನಾಗೆ ಖುಷಿಯಾಗಿತ್ತು. ಮದುವೆಯಾದ ಒಂದೂವರೆ ವರ್ಷದಲ್ಲಿ ಸುರಭಿ ಹುಟ್ಟಿದ್ದಳು. ಸುದೇಶ್ ಸುರಭಿಗಿಂತ ಮೂರು ವರ್ಷ ಚಿಕ್ಕವನು. ಈ ಅವಧಿಯಲ್ಲಿ ಭುವನಾಳ ದೊಡ್ಡ ತಂಗಿ ನಯನಳ ಮದುವೆಯಾಗಿತ್ತು. ಕಿಶೋರ್ ನಾದಿನಿ ಮದುವೆಗೆ ಹಣಕಾಸು ಸಹಾಯ ಮಾಡಿದ್ದ.

ಎರಡು ವರ್ಷ ಕಳೆಯುವುದರಲ್ಲಿ ಸಾಗರ್ ಎಂ.ಎಸ್. ಮಾಡಲು ಅಮೆರಿಕಕ್ಕೆ ಹಾರಿದ್ದ. ಈಶ್ವರ್ ಸೂರತ್ಕಲ್‌ನಲ್ಲಿ ಬಿ.ಇ. ಓದುತ್ತಿದ್ದ. ಭುವನಾ ತುಂಬಾ ಖುಷಿಯಾಗಿದ್ದಳು. ದೇವರಂತಹ ಅತ್ತೆ, ಮಾವ, ತನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಪತಿ, ಮುದ್ದಾದ ಮಕ್ಕಳು, ಓಡಾಡಲು ಕಾರು, ಖರ್ಚುಮಾಡಲು ಹಣ, ಕೆಲಸ ಮಾಡಲು ಆಳು ಕಾಳು, ಅಡುಗೆಯವರು—ಇದೇ ಸ್ವರ್ಗ ಎನ್ನಿಸಿತ್ತವಳಿಗೆ.

ಇದೇ ಸಮಯದಲ್ಲಿ ಕೃಷ್ಣಪ್ರಸಾದ್ ಎನ್ನುವ ಎಂ.ಪಿ.ಯೊಬ್ಬರ ಕೇಸ್ ಕಿಶೋರ್‌ಗೆ ಬಂದಿತ್ತು. ಅವರ ಹತ್ತು ಕೋಟಿ ಬೆಲೆಬಾಳುವ ಆಸ್ತಿಗಾಗಿ ದಾಯಾದಿಗಳ ನಡುವೆ ಜಗಳ ಶುರುವಾಗಿತ್ತು. ಕಿಶೋರ್ ಅವರ ಆಸ್ತಿ ಉಳಿಸಿಕೊಟ್ಟಿದ್ದ. ಅವರಿಗೆ ತುಂಬಾ ಖುಷಿಯಾಗಿತ್ತು.

"ಸರ್. ನೀವು ಕುಟುಂಬ ಸಮೇತ ನಮ್ಮನೆಗೆ ಊಟಕ್ಕೆ ಬರಬೇಕು. ಈ ಭಾನುವಾರ 12 ಗಂಟೆಯ ಹೊತ್ತಿಗೆ ನಮ್ಮ ಮನೆಗೆ ಬಂದುಬಿಡಿ."

ಕಿಶೋರ್ ಒಪ್ಪಿದ್ದ. ಗಂಡ ಹೆಂಡತಿ ಮಾತ್ರ ಹೋಗಿದ್ದರು. ಅಲ್ಲಿ ಅವರ ತಮ್ಮ ರಾಮ್‌ಪ್ರಸಾದ್ ಪರಿಚಯವಾಗಿದ್ದ. ಮೂವತ್ತೈದು ವರ್ಷಗಳಾದರೂ ಅವಿವಾಹಿತನಾಗೇ ಉಳಿದಿದ್ದ ರಾಮ್‌ಪ್ರಸಾದ್ ಕಣ್ಣಿಗೆ ಭುವನಾ ಬಿದ್ದಿದ್ದಳು. ಅದೇ ವೇಳೆಗೆ ಭುವನಾಳ ಅತ್ತೆ ಮಾವ ಮಗನ ಗ್ರಾಜ್ಯುಯೇಷನ್ ಡೇ ಅಟೆಂಡ್ ಮಾಡಲು ಅಮೇರಿಕಕ್ಕೆ ಹೋಗಿದ್ದರು. ಸಾಗರ್ ತನ್ನ ಜೊತೆ ಓದುತ್ತಿದ್ದ ಅಪ್ಸರಾಳನ್ನು ಮೆಚ್ಚಿದ್ದ. ಅಪ್ಸರಾಳ ತಂದೆ ತಾಯಿ ಕೂಡ ಅಲ್ಲಿಗೆ ಹೋಗಿದ್ದರು.

ಭುವನಾ ಮನೆಯಲ್ಲಿ ಒಬ್ಬಳೇ ಇರುತ್ತಾಳೆಂದು ಗೊತ್ತಾದ ಮೇಲೆ ರಾಮ್‌ಪ್ರಸಾದ್ ಆಗಾಗ್ಗೆ ಬರಲಾರಂಭಿಸಿದ್ದ. ಕೆಲವು ಸಲ ಅಲ್ಲೇ ಊಟಮಾಡುತ್ತಿದ್ದ. ಯಾವಾಗಲೂ ಅವಳ ಚೆಲುವನ್ನು ಹೊಗಳುತ್ತಿರುತ್ತಿದ್ದ. ಒಮ್ಮೆ ಯಾವುದೋ ಮಾತಿಗೆ, "ಭುವನಾ ನೀವು ಮೊದಲ ಸಲ ನಮ್ಮ ಮನೆಗೆ ಬಂದಾಗ ನಿಮ್ಮನ್ನು ನೋಡಿ ನಾನು ಏನಂದುಕೊಂಡಿದ್ದೆ ಗೊತ್ತಾ?"

"ನನಗೇನು ಗೊತ್ತು?"

"ನೀವು ಕಿಶೋರ್ ಮಗಳು ಅಂದುಕೊಂಡಿದ್ದೆ."

ಅವಳು ಮಾತಾಡಿರಲಿಲ್ಲ.

"ನೀವು ಏನೇ ಹೇಳಿ. ಕಿಶೋರ್ ನಿಮಗೆ ಸರಿಯಾದ ಜೋಡಿಯಲ್ಲ."

"ಹಾಗೆಲ್ಲಾ ಅನ್ನಬೇಡಿ. ನನಗಿಷ್ಟವಾಗಲ್ಲ."

"ಕಿಶೋರ್ ಒಳ್ಳೆಯವರು. ಬುದ್ಧಿವಂತರು. ಶ್ರೀಮಂತರು. ನಿಮ್ಮನ್ನು ರಾಣಿ